ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ▯ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner



ಒಖಿ ಚಂಡಮಾರುತ : ಕರ್ನಾಟಕದ ಕರಾವಳಿ ತೀರದಲ್ಲಿ ಗಾಳಿ ವೇಗ ಹೆಚ್ಚಳ ಸಾಧ್ಯತೆ

ಒಖಿ ಚಂಡಮಾರುತ ತಮಿಳುನಾಡು ಹಾಗೂ ಕೇರಳದ ಕರಾವಳಿ ತೀರದಲ್ಲಿ ಹಾನಿಯುಂಟು ಮಾಡಿದ್ದು, ಮುಂದಿನ 24 ತಾಸುಗಳಲ್ಲಿ ಕೇರಳ ಹಾಗೂ ಕರ್ನಾಟಕದ ಕರಾವಳಿ ತೀರದಲ್ಲಿ ಗಾಳಿಯು ಪ್ರತಿ ಗಂಟೆಗೆ 65 ಕಿ.ಮೀ. ವೇಗ ಪಡೆದುಕೊಳ್ಳುವ ಸಾಧ್ಯತೆ ಇದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಎಚ್ಚರಿಸಿದೆ. ಚಂಡಮಾರುತದ ಗಾಳಿಯು ವೇಗ ಪಡೆಯುತ್ತಿದ್ದು, ಮುಂದಿನ 24 ತಾಸುಗಳಲ್ಲಿ ಈ ಎರಡೂ ರಾಜ್ಯಗಳ ಕರಾವಳಿ ತೀರ ಸೇರಿದಂತೆ ಹಲವೆಡೆ ಭಾರಿ ಮಳೆ ಬೀಳಲಿದೆ ಎಂದು ತಿಳಿಸಿದೆ.



ಡಾ.ವೀರೇಂದ್ರ ಹೆಗ್ಗಡೆಗೆ ಇನ್‌ಕ್ಲೂಸಿವ್ ಫೈನಾನ್ಸ್ ಇಂಡಿಯಾ ಪ್ರಶಸ್ತಿ

ಆಕ್ಸೆಸ್ ಇಂಡಿಯಾ ನೀಡುವ ಪ್ರತಿಷ್ಠಿತ ಇನ್‌ಕ್ಲೂಸಿವ್ ಫೈನಾನ್ಸ್ ಇಂಡಿಯಾ ಪ್ರಶಸ್ತಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಆಯ್ಕೆ ಆಗಿದ್ದಾರೆ. ಗ್ರಾಮೀಣ ಅಭಿವೃದ್ಧಿ ಯೋಜನೆಯ ಮೂಲಕ ಆರ್ಥಿಕ ಸಬಲೀಕರಣಕ್ಕೆ ಹೆಗ್ಗಡೆ ಅವರು ನೀಡಿರುವ ಕೊಡುಗೆಗಾಗಿ ಈ ಪ್ರಶಸ್ತಿ ನೀಡಲಾಗುತ್ತಿದೆ.

'ಖಾವಿ ಹಾಕಿಕೊಂಡು ಪೂರ್ಣಜ್ಞಾನಿ ಎಂದು ಸಂಭ್ರಮಿಸುವ ಪೇಜಾವರ ಶ್ರೀ'

ಖಾವಿ ಹಾಕಿಕೊಂಡರೆ ಪೂರ್ಣಜ್ಞಾನಿ ಎಂದು ಸಂಭ್ರಮಿಸುವ ಪೇಜಾವರರು ಅಜ್ಞಾನಿ. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಯನ್ನು ಸರಿಯಾಗಿ ಓದದೆ ಅವರ ಬಗ್ಗೆ ಮಾತನಾಡುವುದು ತಪ್ಪು ಎಂದು ಪ್ರೊ.ಜಿ.ಕೆ.ಗೋವಿಂದರಾವ್ ಹೇಳಿದ್ದಾರೆ. ನಮ್ಮ ದೇಶಕ್ಕಿರುವುದು ಒಂದೇ ಧರ್ಮ, ಅದು ಪ್ರಜಾತಂತ್ರ. ದೇಶಕ್ಕಿರುವುದು ಒಂದೇ ಧರ್ಮಗ್ರಂಥ, ಅದು ಸಂವಿಧಾನ ಎಂದಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :26 ಶನಿವಾರ ಡಿ.2, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಜಿಲ್ಲೆಯ 9 ಕಡೆ ಇಂದಿರಾ ಕ್ಯಾಂಟೀನ್

▯ ಜನವರಿಯಿಂದ ಕಾರ್ಯಾರಂಭ ▯ ಜನನಿಬಿಡ ಪ್ರದೇಶದಲ್ಲಿ ಕ್ಯಾಂಟೀನ್‌ಗೆ ಆಲೋಚನೆ

ಹಾಸನ : ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ಆರಂಭಿಸಲು ಜಿಲ್ಲಾಡಳಿತ ಸಿದ್ಧತೆ ನಡೆಸಿದೆ.

ಹಾಸನ ನಗರದಲ್ಲಿ 2 ಹಾಗೂ ಜಿಲ್ಲೆಯ ಇತರ ಎಲ್ಲಾ ತಾಲ್ಲೂಕುಗಳಲ್ಲಿ ತಲಾ ಒಂದು ಇಂದಿರಾ ಕ್ಯಾಂಟೀನ್ ಪ್ರಾರಂಭಿಸಲಾಗುತ್ತಿದ್ದು , ಹೊಸ ವರ್ಷದ ಆರಂಭದಲ್ಲೇ ಈ ಎಲ್ಲಾ 9 ಕ್ಯಾಂಟೀನ್‌ಗಳು ಕಾರ್ಯಾರಂಭ ಮಾಡಲಿವೆ ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ತಿಳಿಸಿದರು.

ಹೆಚ್ಚು ಜನರಿಗೆ ಈ ಕಾರ್ಯಕ್ರಮದ ಲಾಭ ದೊರೆಯಬೇಕು ಎನ್ನುವ ಉದ್ದೇಶದಿಂದ ಜನದಟ್ಟಣೆ ಇರುವ ಸ್ಥಳಗಳಲ್ಲಿ ಕ್ಯಾಂಟೀನ್ ಆರಂಭಿಸಲಾಗುತ್ತಿದೆ. ಈ ಸಂಬಂಧ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲೂ ಈಗಾಗಲೇ ಸ್ಥಳಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ ಎಂದರು.

ನಗರ ಸ್ಥಳೀಯ ಸಂಸ್ಥೆಗಳ ಜನಸಂಖ್ಯೆ ಆಧರಿಸಿ ಉಪಹಾರ ಮತ್ತು ಊಟವನ್ನು ಮಿತಿಗೊಳಿಸಲಾಗಿದೆ. ಅದರಂತೆ ಹಾಸನ ನಗರದಲ್ಲಿ 1,000, ಅರಸೀಕೆರೆ ಮತ್ತು ಚನ್ನರಾಯಪಟ್ಟಣದಲ್ಲಿ ತಲಾ 500, ಹೊಳೆನರಸೀಪುರ, ಸಕಲೇಶಪುರ ಮತ್ತು ಬೇಲೂರಿನಲ್ಲಿ ತಲಾ 300, ಆಲೂರು ಮತ್ತು ಅರಕಲಗೂಡಿನಲ್ಲಿ ತಲಾ 200 ಜನಸಂಖ್ಯೆಗೆ ಉಪಹಾರ/ಊಟ ಒದಗಿಸಲಾಗುತ್ತಿದೆ.

> "ಇಂದಿರಾ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ನಗರ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಜಾಗ ಗುರುತಿಸಲಾಗಿದೆ. ಎಲ್ಲಾ ಸಿದ್ಧತಾ ಕಾರ್ಯಗಳು ಪೂರ್ಣಗೊಂಡಿವೆ. ಹೊಸ ವರ್ಷದಲ್ಲಿ ಆರಂಭಿಸಲು ಆಲೋಚಿಸಲಾಗಿದೆ.
>
> -ರೋಹಿಣಿ ಸಿಂಧೂರಿ, ಡಿ.ಸಿ.

ಜಿಲ್ಲೆಯಾದ್ಯಂತ ದಿನನಿತ್ಯ ಪ್ರತಿ ಹೊತ್ತಿಗೆ ಸುಮಾರು 3,300 ಜನರಿಗೆ ಈ ಕಾರ್ಯಕ್ರಮದ ಪ್ರಯೋಜನ ದೊರೆಯಲಿದ್ದು, ಸ್ಥಳೀಯ ಉಪಹಾರ/ ಊಟ ನೀಡಲು ಚಿಂತನೆ ನಡೆಸಲಾಗಿದೆ. ಬೆಳಗ್ಗೆ ರೂ. 5ಕ್ಕೆ ಉಪಹಾರ ಹಾಗೂ ಮಧ್ಯಾಹ್ನ ಮತ್ತು ಸಂಜೆ ರೂ.10ರ ದರದಲ್ಲಿ ಊಟ ಕಲ್ಪಿಸಲಾಗುವುದು ಎಂದು ರೋಹಿಣಿ ಸಿಂಧೂರಿ ತಿಳಿಸಿದರು.

ಇಂದಿರಾ ಕ್ಯಾಂಟೀನ್‌ಗಳಿಗೆ ತ್ವರಿತವಾಗಿ ಆಹಾರ ಸರಬರಾಜು ಮಾಡುವ ಸಂಬಂಧ ಆಹಾರ ಸರಬರಾಜುದಾರರನ್ನು ಗುರುತಿಸಲು ಎರಡು ಪ್ಯಾಕೇಜ್ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿದೆ ಎಂದರು. (-ಪುಟ 4ಕ್ಕೆ)

ಇಂದಿರಾ ಕ್ಯಾಂಟೀನ್ ಎಲ್ಲೆಲ್ಲಿ?

ಹಾಸನ : ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಸ್ಪತ್ರೆ ಹಾಗೂ ನಗರಸಭೆ ವಸ್ತುಪ್ರದರ್ಶನ
ಅರಸೀಕೆರೆ: ಪಶು ವೈದ್ಯ ಶಾಲೆ, ರೈಲ್ವೆ ಸ್ಟೇಷನ್ ರಸ್ತೆ
ಚ.ರಾ.ಪಟ್ಟಣ : ಪಿಡಬ್ಲ್ಯೂಡಿ ಕ್ವಾಟ್ರಸ್ (ವಾರ್ಡ್ ನಂ.7)
ಹೊಳೆನರಸೀಪುರ : ಸಾರ್ವಜನಿಕ ಆಸ್ಪತ್ರೆ, ನೌಕರರ ವಸತಿ ಗೃಹದ ಮುಂಭಾಗ
ಸಕಲೇಶಪುರ: ಮಿನಿ ವಿಧಾನಸೌಧ ಮುಂಭಾಗ, ಬಿ.ಎಂ. ರಸ್ತೆ
ಬೇಲೂರು: ಪ್ರವಾಸಿ ಮಂದಿರ, ಲೋಕೋಪಯೋಗಿ ಇಲಾಖೆ
ಅರಕಲಗೂಡು: ಹಾಪ್‌ಕಾಮ್ಸ್ ಪಕ್ಕದಲ್ಲಿರುವ ಸ್ಥಳ
ಆಲೂರು : ಪಟ್ಟಣ ಪಂಚಾಯಿತಿಯ ಅಂಗಡಿ ಮಳಿಗೆಗಳ ಪಶ್ಚಿಮ ದಿಕ್ಕಿನಲ್ಲಿರುವ ಸ್ಥಳ

▯ ಬಾಬು ಜಗಜೀವನ್‌ರಾಂ ಭವನ ನಿರ್ಮಾಣಕ್ಕೆ ಒತ್ತಾಯ

ಮಲ ಸುರಿದುಕೊಂಡು ಪ್ರತಿಭಟನೆ

ಚನ್ನರಾಯಪಟ್ಟಣ : ಬಾಬು ಜಗಜೀವನ್‌ರಾಂ ಭವನ ನಿರ್ಮಾಣ ಮಾಡಬೇಕೆಂದು ಆಗ್ರಹಿಸಿ ತಾಲ್ಲೂಕು ಕಛೇರಿ ಎದುರು ದಲಿತಪರ ಜನಾಂಗದವರು ಮಲವನ್ನು ಮೈಮೇಲೆ ಸುರಿದುಕೊಂಡು ಶುಕ್ರವಾರ ಪ್ರತಿಭಟನೆ ನಡೆಸಿದರು.

ಸರ್ಕಾರದಿಂದ ಜಗಜೀವನರಾಂ ನಿರ್ಮಾಣ ಮಾಡಬೇಕೆಂದು 1 ಕೋಟಿ ರೂ. ಅನುದಾನ ಬಂದಿದೆ. ಆದರೆ ನಿವೇಶನ ಇಲ್ಲ ಎಂದು 2 ವರ್ಷಗಳಿಂದ ಈ ಹಣದ ಕಡತವನ್ನು ಸಮಾಜ ಕಲ್ಯಾಣ ಇಲಾಖೆಯಲ್ಲೇ ಧೂಳು ಹಿಡಿಯುವಂತೆ ಮಾಡಲಾಗಿದೆ. ಆದರೆ ಪಟ್ಟಣ ಮಧ್ಯಭಾಗದಲ್ಲಿರುವ ಗಣಪತಿ ಸೇವಾ ಸಮಿತಿ ಪಕ್ಕದಲ್ಲಿರುವ ಜಾಗವನ್ನು ಜಗಜೀವನರಾಂ ಭವನಕ್ಕೆ ನೀಡಬೇಕೆಂದು ಆಗ್ರಹಿಸಿ ಕಳೆದ ಐದು ದಿನಗಳಿಂದ ಧರಣಿ ನಡೆಸಲಾಗುತ್ತಿದೆ. ಆದರೆ ಇದುವರೆಗೂ ಪ್ರತಿಭಟನಾ ಸ್ಥಳಕ್ಕೆ ಯಾವುದೇ ಅಧಿಕಾರಿಯಾಗಲೀ ಅಥವಾ ರಾಜಕೀಯ ಪ್ರತಿನಿಧಿಗಳಾಗಲೀ ಇತ್ತ ಗಮನ ಹರಿಸಿಲ್ಲ ಎಂದು ಆರೋಪಿಸಿ ದ.ಸಂ.ಸ. ತಾಲ್ಲೂಕು ಅಧ್ಯಕ್ಷ ದಂಡೋರ ಮಂಜುನಾಥ್, ಪುರಸಭಾ ಸದಸ್ಯ ಪರಶುರಾಮ್, ಮಾಜಿ ಪುರಸಭಾ ಸದಸ್ಯ ಪರಮೇಶ್, ಧರ್ಮ, ಧರ್ಮೇಂದ್ರ ಮತ್ತಿತರರು ತಲೆ ಮೇಲೆ ಮಲ ಮೂತ್ರ ಸುರಿದುಕೊಂಡು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಸ್ಥಳಕ್ಕಾಗಮಿಸಿದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶ್ರೀಧರ್, ಧರಣಿನಿರತರ ಮನವೊಲಿಕೆಗೆ ಯತ್ನಿಸಿದರು. (-4ನೇ ಪುಟಕ್ಕೆ)

ಕುಡಿಯುವ ನೀರು : ಜಿಲ್ಲಾಡಳಿತ ನಿರ್ಲಕ್ಷ್ಯ

ಹಾಸನ : ಜಿಲ್ಲೆಯ ಹಲವೆಡೆ ಕುಡಿಯುವ ನೀರಿಗೆ ತೊಂದರೆ ಎದುರಾಗಿದೆ. ಸಮಸ್ಯೆಯ ಭೀಕರತೆಯನ್ನು ಅರಿಯಲು ಜಿಲ್ಲಾಡಳಿತಕ್ಕೆ ಸಾಧ್ಯವಾಗಿಲ್ಲ. ಈ ಕುರಿತು ಕಿಂಚಿತ್ತೂ ತಲೆಕೆಡಿಸಿಕೊಳ್ಳುತ್ತಿಲ್ಲ. ಇಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಜನ ದಂಗೆ ಏಳುವ ಸನ್ನಿವೇಶ ದೂರವಿಲ್ಲ ಎಂದು ಹೊಳೆನರಸೀಪುರ ಕ್ಷೇತ್ರದ ಶಾಸಕ ಹೆಚ್.ಡಿ.ರೇವಣ್ಣ ಹೇಳಿದರು.

ಜಿಲ್ಲಾ ಪಂಚಾಯತ್‌ಗೆ ಕುಡಿಯುವ ನೀರಿಗೆ ಸಂಬಂಧಿಸಿದಂತೆ 10 ಕೋಟಿ ರೂ. ಅನುದಾನ ಬಂದಿದೆ. ಆದರೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಬ್ಬರ್ ಸ್ಟಾಂಪ್ ಇದ್ದಂತೆ. ಸಭೆಯ ರೆಸಲ್ಯೂಶನ್ ಕೂಡ ಬರೆಯುತ್ತಿಲ್ಲ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. (-4ನೇ ಪುಟಕ್ಕೆ)

> "ಜಿಲ್ಲಾ ಪಂಚಾಯತ್‌ನಲ್ಲಿ ದಳ(ಎಸ್) ಸದಸ್ಯರ ಸಂಖ್ಯೆಯೇ ಹೆಚ್ಚು. ನಾವೇನು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. 2 ತಿಂಗಳಾದರೂ ಕುಡಿಯುವ ನೀರು ಯೋಜನೆಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯೇ ತಯಾರಾಗಿಲ್ಲ. ಕಾನೂನು ರೀತಿ ಹೋರಾಟ ಗೊತ್ತೇ ಇದೆ.
>
> -ಹೆಚ್.ಡಿ.ರೇವಣ್ಣ, ಶಾಸಕ.

'ಮರ್ಯಾದೆ ಬಿಟ್ಟವರು ಓಟು ಕೇಳುತ್ತಾರೆ'

ಕಲ್ಲಿನ ದುಡ್ಡು ಇರುವವರು ಮುಂಬರುವ ಚುನಾವಣೆಯಲ್ಲಿ ಹಾಸನದಿಂದ ಸ್ಪರ್ಧಿಸುತ್ತಾರೆ. ಯಾವ ಮರ್ಯಾದೆ ಬಿಟ್ಟು ಇವರು ಓಟು ಕೇಳುತ್ತಾರೆ? ವಾಹನಗಳಲ್ಲಿ ಸಾಧನೆ ಪ್ರಚಾರವನ್ನು ಅಳವಡಿಸಿಕೊಂಡು ಜನರ ಗಮನ ಸೆಳೆಯುತ್ತಿದ್ದಾರೆ. ಇದೇನ್ರಿ ಇದು..?

ಹೆಚ್.ಡಿ.ರೇವಣ್ಣ ಎಂದಿನಂತೆ ಹಾಸ್ಯಮಿಶ್ರಿತ ಶೈಲಿಯಲ್ಲಿ ವಿಧಾನಸಭೆ ಚುನಾವಣೆ ಟಿಕೆಟ್ ಆಕಾಂಕ್ಷಿಗಳನ್ನು ಜರಿದರು. ಇನ್ನು ಕಾಂಗ್ರೆಸ್‌ನಲ್ಲಿ ಟೈ ಕದ್ದವರು, ಮಾಮೂಲಿ ವಸೂಲಿ ಮಾಡುವವರು, ಕೆ.ಡಿ.ಪಿ. ಇನ್ನಿತರೆ ಸದಸ್ಯರಾಗಿದ್ದಾರೆ ಎಂದರು.

ಬಿಜೆಪಿ, ಕಾಂಗ್ರೆಸ್ ವಿರುದ್ಧ ಕಟು ಟೀಕೆ

ಬಿಜೆಪಿ ಹಾಗೂ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಹೆಚ್.ಡಿ. ರೇವಣ್ಣ, ಈ ಎರಡೂ ರಾಷ್ಟ್ರೀಯ ಪಕ್ಷಗಳಿಗೂ ರೈತರ ಪರ ಆಲೋಚನೆ ಇಲ್ಲ ಎಂದು ಹೇಳಿದರು. ಬಿಜೆಪಿಯವರು ಪರಿವರ್ತನಾ ರ್‍ಯಾಲಿಯಲ್ಲಿ ತೊಡಗಿದ್ದಾರೆ. ಕಾಂಗ್ರೆಸ್‌ನವರು 'ಮನೆ ಮನೆಗೆ ಕಾಂಗ್ರೆಸ್' ಅಭಿಯಾನ ಆರಂಭಿಸಿದ್ದಾರೆ ಎಂದರಲ್ಲದೆ, 'ಮನೆ ಮನೆಗೆ ಕಾಂಗ್ರೆಸ್' ಅಭಿಯಾನದಲ್ಲಿ ನಾಯಕರುಗಳು ಹೋಗುತ್ತಿಲ್ಲ. ಕೆಲವು ಹುಡುಗರಿಗೆ ದುಡ್ಡು ಕೊಟ್ಟು ಕಳುಹಿಸುತ್ತಿದ್ದಾರೆ. ನಾಯಕರು ಹೋದರೆ ಹಳ್ಳಿ ಹೆಂಗಸರು ಎಲೆ, ಅಡಿಕೆ ಜಗಿದು ಮುಖಕ್ಕೆ ಉಗಿಯುತ್ತಾರೆ. ಹಾಗಾಗಿಯೇ ಈ ಕೆಲಸಕ್ಕಾಗಿ ಹುಡುಗರನ್ನು ಬಿಟ್ಟಿದ್ದಾರೆ ಎಂದು ಹೇಳಿದರು.

ಹಿಂದಿನ ಆಡಳಿತಗಾರರ ದ್ವೇಷದ ಪರಿಣಾಮ 18 ಕೋಟಿ ಪರಿಹಾರ

ಹಾಸನ : ನಮ್ಮ ಜನಪ್ರತಿನಿಧಿಗಳು ಹಾಗೂ ಆಡಳಿತಗಾರರ ದಿವ್ಯ ನಿರ್ಲಕ್ಷ್ಯ, ದ್ವೇಷ, ಅಸೂಯೆ ಇದ್ದರೆ ನಷ್ಟ ಹೇಗಾಗುತ್ತದೆ ಎಂಬುದನ್ನು ಕೇಳಿದ್ದೇವೆ.

ನಗರದ ಹೊರವಲಯದಲ್ಲಿರುವ ಉದ್ದೂರು ರಿಂಗ್ ರಸ್ತೆಗೆ ಸಂಬಂಧಿಸಿದಂತೆ ಈಗ ಪರಿಹಾರ ಹಣ ನಿಗದಿಯಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗುಂಟೆಗೆ 3,56,000 ರೂ. ದರ ನಿಗದಿಪಡಿಸಲಾಗಿದೆ. ಇನ್ನು ಮೂರ್‍ನಾಲ್ಕು ದಿನದಲ್ಲಿ ಇದು ಜಿಲ್ಲಾಧಿಕಾರಿಗಳ ಕಛೇರಿಯಿಂದ ಪ್ರಾಧಿಕಾರಕ್ಕೆ ಶಿಫಾರಸ್ಸು ಆಗಲಿದೆ.

ಉದ್ದೂರು ರಿಂಗ್ ರಸ್ತೆಗೆ ಪರಿಹಾರ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸಿದ್ದರಿಂದಲೇ ಈಗ ಒಂದಕ್ಕಿಂತ ಹತ್ತು ಪಟ್ಟು ಹಣವನ್ನು ಸಂತ್ರಸ್ತ ರೈತರಿಗೆ ನೀಡಬೇಕಾಗಿದೆ.

ಈ ಹಿಂದೆ ಚೌಡೇಗೌಡರು ಪ್ರಾಧಿಕಾರದ ಆಯುಕ್ತರಾಗಿದ್ದ ಸಂದರ್ಭದಲ್ಲಿ 1992ರ ಅವಧಿಯಲ್ಲಿ ರಿಂಗ್ ರಸ್ತೆಗೆ ಸಂಬಂಧಿಸಿದಂತೆ ಗುಂಟೆಗೆ 40,000 ರೂ. ಪರಿಹಾರ ಧನ ನಿಗದಿಯಾಗಿತ್ತು. ಬಹುಶಃ 13 ಎಕರೆಗೆ 26 ಲಕ್ಷ ರೂ.ನಲ್ಲಿ ಎಲ್ಲವೂ ಮುಗಿದು ಹೋಗುತ್ತಿತ್ತು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಪ್ರಾಧಿಕಾರ ಈಗ 13 ಎಕರೆಗೆ 18 ಕೋಟಿ ರೂ. ಗಳನ್ನು ಪರಿಹಾರ ನೀಡಬೇಕಿದೆ.

ಪ್ರಾಧಿಕಾರ ಆರ್ಥಿಕವಾಗಿ ಲಾಭದಲ್ಲೇನೂ ಇಲ್ಲ. ಲೋಕೋಪಯೋಗಿ ಇಲಾಖೆಯವರು ಪರಿಹಾರ ನೀಡಲು ಅಸಮ್ಮತಿ ವ್ಯಕ್ತಪಡಿಸಿದಾಗ, ನಗರಾಭಿವೃದ್ಧಿ ಪ್ರಾಧಿಕಾರವೇ ಪರಿಹಾರ ನೀಡುವ ಹೊಣೆ ಹೊರಬೇಕಾಯಿತು.

ಹಾಗೆ ನೋಡಿದರೆ ನಗರಾಭಿವೃದ್ಧಿ ಪ್ರಾಧಿಕಾರ ಮುಚ್ಚುವ ಹಂತವನ್ನೇ ತಲುಪಿತ್ತು. ಎಸ್.ಎಂ.ಕೃಷ್ಣನಗರ ಬಡಾವಣೆಯಲ್ಲಿ ನಿವೇಶನ ಹಂಚಿಕೆಯಾದ ನಂತರ ಪ್ರಾಧಿಕಾರಕ್ಕೆ ಆದಾಯವೂ ಬಂತು. ಅದರಿಂದ ಈಗ ಪರಿಹಾರ ನೀಡಬೇಕಾಗಿದೆ.

ಹಿಂದೆ ಕೃಷ್ಣನಗರವೇ ಮುಳುಗಡೆ ಹಂತ ತಲುಪಿತ್ತು. ಅಲ್ಲಿ ರಾಜೀವ್ ವಸತಿ ಯೋಜನೆ ಬಡಾವಣೆ ಮತ್ತು ಸಂಘ ಸಂಸ್ಥೆಗಳಿಗೆ ನಿವೇಶನ ನೀಡಬೇಕೆಂಬ ಚಿಂತನೆ ಇದ್ದ ಫಲವಾಗಿ ಕೃಷ್ಣನಗರ ಒಂದು ರೀತಿಯಲ್ಲಿ ಹಾಳಾಗುತ್ತಿತ್ತು. ಒಂದು ವೇಳೆ ಹಾಗಾಗಿದ್ದರೆ ಪ್ರಾಧಿಕಾರವೇ ಮುಚ್ಚಿ ಹೋಗುತ್ತಿತ್ತು.

ಇಲ್ಲಿಯ ಸಂತ್ರಸ್ತ ರೈತರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ, ಕಾನೂನು ಹೋರಾಟ ನಡೆಸಿದ ಫಲವಾಗಿ ಅವರಿಗೆ ಪರಿಹಾರ ದೊರೆಯಲಿದೆ. ನವಿಲೆ ಅಣ್ಣಪ್ಪ ಅಧ್ಯಕ್ಷರಾದ ನಂತರ ಶೇ.60 : 40ರ ಅನುಪಾತದಲ್ಲಿ ಕೋರ್ಟ್ ನಿವೇಶನ ಹಂಚಿಕೆಗೆ ಆದೇಶ ನೀಡಿತು. ಸರ್ಕಾರ ಅನುಮೋದನೆ ನೀಡಿತು. ಈಗ ಎಸ್.ಎಂ. ಕೃಷ್ಣನಗರ ಸುಂದರ ಬಡಾವಣೆಯಾಗಿ ರೂಪುಗೊಳ್ಳಲಿದೆ.

ಉದ್ದೂರು ರಸ್ತೆಗೆ 26 ಲಕ್ಷ ರೂ. ಬದಲು 18 ಕೋಟಿ ರೂ.ಗಳನ್ನು ಕೊಡಬೇಕಾಗಿದೆ. ಹಿಂದಿನವರು ಮಾಡಿದ ತಪ್ಪಿನಿಂದ ಈಗ ಭಾರೀ ಪ್ರಮಾಣದ ಹಣ ತೆರಬೇಕಾಗಿದೆ. ಹಿಂದಿನ ಆಡಳಿತಗಾರರ ದ್ವೇಷಕ್ಕೆ ಬೆಲೆ ತೆರಲೇಬೇಕಾಗಿದೆ.

- ▯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಹೊರೆ
- ▯ ಇದೊಂದು ಅನ್ಯಾಯದ ಪರಮಾವಧಿ
- ▯ ಮುಚ್ಚುವ ಹಂತ ತಲುಪುವಾಗ ಸುಧಾರಣೆ
- ▯ ಹೆಚ್ಚು ಹಣ ಪರಿಹಾರಕ್ಕೆ ಯಾರು ಹೊಣೆ?

ಕಾಲಮಿತಿಯೊಳಗೆ ಕಾಮಗಾರಿ ಮುಗಿಸಬೇಕಲ್ಲವೇ?

ಹಾಸನ : ನಗರದ ಶಂಕರ ಮಠ ರಸ್ತೆ ಹಾಗೂ ಸಂಪಿಗೆ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಕಾಮಗಾರಿ ಪ್ರಕ್ರಿಯೆಯಲ್ಲಿದೆ. ಈ ರಸ್ತೆಗಳ ಒಂದು ಬದಿಯಲ್ಲಿ ಜಲ್ಲಿ ಹಾಕಲಾಗಿದೆ. ಇನ್ನಿತರೆ ಕಾಮಗಾರಿಗೆ ಬಳಸುವ ಕಚ್ಚಾವಸ್ತುಗಳು ಇವೆ.

ಈ ಎರಡೂ ಪ್ರಮುಖವಾದ ರಸ್ತೆಗಳು. ವಾಹನಗಳ ಸಂಚಾರ ದಟ್ಟಣೆ ಇರುತ್ತದೆ. ಯಾವಾಗಲೂ ಜನರು ಓಡಾಡುತ್ತಲೇ ಇರುತ್ತಾರೆ. ಆದರೆ ಜಲ್ಲಿಯನ್ನು ಹಾಕಿ ಬಿಟ್ಟಿರುವುದರಿಂದ ಜನರಿಗೆ ತೊಂದರೆ ಆಗಿದೆ. ಇಲ್ಲಿ ಕೆಲಸ ಅರ್ಧಂಬರ್ಧವಾಗಿದೆ. ಕಾಮಗಾರಿ ಯಾಕೋ ಮುಗಿಯುತ್ತಲೇ ಇಲ್ಲ. ಇದರಿಂದ ಧುತ್ತನೆ ಧೂಳು ಬರುತ್ತಿದೆ.

ನಿನ್ನೆಯಿಂದ ನಗರದಲ್ಲಿ ಮಳೆಯ ವಾತಾವರಣವಿದೆ. ಚಂಡಮಾರುತ ಪರಿಣಾಮ ಆಗಾಗ್ಗೆ ಮಳೆ ಬಿಟ್ಟೂ ಬಿಡದೆ ಆಗುತ್ತಿದೆ. ಇದರಿಂದ ಇಲ್ಲಿ ಕೆಸರುಮಯವಾಗಿದೆ. ಓಡಾಡಲು ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಯಾವುದೇ ಕಾಮಗಾರಿ ಇರಲಿ, ಕಾಲಮಿತಿಯೊಳಗೆ ಮುಗಿಸಬೇಕು. ಗುತ್ತಿಗೆದಾರರು ದುರಾಸೆಗಾಗಿ ಮೂರ್‍ನಾಲ್ಕು ಕೆಲಸವನ್ನು ತೆಗೆದುಕೊಳ್ಳುತ್ತಾರೆ. ಒಂದು ಕೆಲಸವನ್ನು ಆರಂಭಿಸಿ ಹಾಗೆಯೇ ನಿಲ್ಲಿಸುತ್ತಾರೆ. ಹಾಗಾಗಿಯೇ ನಿವಾಸಿಗಳು ತೊಂದರೆ ಅನುಭವಿಸಬೇಕಾಗಿದೆ. ಧೂಳು ಕುಡಿದು ಕಾಯಿಲೆ ಬೀಳುವ ಸ್ಥಿತಿಯೂ ನಿರ್ಮಾಣವಾಗಿದೆ. ಇದಲ್ಲದೆ ಕಾಮಗಾರಿ ಮುಗಿದ ನಂತರವೂ ಜಲ್ಲಿ ಕಾಂಕ್ರೀಟ್‌ನ್ನು ಅಲ್ಲೇ ಬಿಟ್ಟು ಹೋಗುವ ಪರಿಸ್ಥಿತಿಯೂ ಇದೆ. ಇಂಜಿನಿಯರ್‌ಗಳಿಗೆ ತಿಳಿವಳಿಕೆ ಇದ್ದಂತಿಲ್ಲ. ಇಂಜಿನಿಯರ್‌ಗಳು ಅಲ್ಲಿಯೇ ಇದ್ದು ಕಾಮಗಾರಿಗೆ ಸಂಬಂಧಿಸಿದಂತೆ ನಿರ್ವಹಣೆ ಮೇಲುಸ್ತುವಾರಿಯನ್ನು ಪರಿಶೀಲಿಸುತ್ತಲೇ ಇಲ್ಲ.

ಸಂತೆಪೇಟೆಯಿಂದ ಮಾರ್ಗ ಕಲ್ಪಿಸುವ ಗೊರೂರು ರಸ್ತೆಯ ಕಾಮಗಾರಿ ಕೂಡ ಹೀಗೆಯೇ ಆಗಿದೆ. ಇಂಜಿನಿಯರ್‌ಗಳು ಇರುವುದೇ ಇಲ್ಲ. ಈ ಇಂಜಿನಿಯರ್‌ಗಳಿಗೆ ಸರ್ಕಾರವಂತೂ ಸಂಬಳ ಕೊಡುತ್ತದೆ.

ಕಾಮಗಾರಿಗೆ ಸಂಬಂಧಿಸಿದಂತೆ ಬೋರ್ಡ್‌ಗಳನ್ನು ಹಾಕಬೇಕು. ಇದಕ್ಕೆ ನಿಯಮಗಳು ಕೂಡ ಇವೆ. ರಸ್ತೆಗೆ ಅನುದಾನ ತರುವುದೇ ದೊಡ್ಡ ಸಮಸ್ಯೆ. ಕಾಮಗಾರಿ ಮಂಜೂರಾದರೂ ಅನುದಾನಕ್ಕೆ ಕಷ್ಟಪಡಬೇಕು. ಅಷ್ಟೆಲ್ಲಾ ಪ್ರಯತ್ನ ನಡೆಸಿ ಅನುದಾನ ತಂದರೂ ಕಾಲಮಿತಿಯೊಳಗೆ ಕೆಲಸಗಳಾಗುತ್ತಿಲ್ಲ. ಇನ್ನಾದರೂ ಕಾಲಮಿತಿಯೊಳಗೆ ರಸ್ತೆ ಕಾಮಗಾರಿಗಳನ್ನು ಮುಗಿಸುವರೇ?

- ▯ ಜವಾಬ್ದಾರಿಯನ್ನೇ ಮರೆತ ಗುತ್ತಿಗೆದಾರರು
- ▯ ಸ್ಥಳದಲ್ಲಿ ಹಾಜರಿರದ ಇಂಜಿನಿಯರ್‌ಗಳು
- ▯ ಟೆಂಡರ್ ನಿಯಮವನ್ನೇ ಪಾಲಿಸುತ್ತಿಲ್ಲ
- ▯ ಜನರಿಗೆ ನಿತ್ಯವೂ ಕಿರಿಕಿರಿ

'ಏಡ್ಸ್ ಸೋಂಕಿತರು ಧೈರ್ಯ ಕಳೆದುಕೊಳ್ಳಬಾರದು'

ಹಾಸನ: ಏಡ್ಸ್ ಸೋಂಕಿತರು ಧೈರ್ಯ ಕಳೆದುಕೊಳ್ಳದೆ ಆಸ್ಪತ್ರೆಗಳಲ್ಲಿ ಸಿಗುವ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಳ್ಳುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಎಆರ್‌ಟಿ ಕೇಂದ್ರದ ಹಿರಿಯ ವೈದ್ಯಾಧಿಕಾರಿ ಡಾ॥ಚಿನ್ನನಾಗಪ್ಪ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, ವೈ.ಎಸ್. ಆರ್ ಫೌಂಡೇಷನ್, ಸಮುದಾಯ ಆಧಾರಿತ ಸಂಸ್ಥೆಗಳು, ಜಿಲ್ಲೆಯ ರೆಡ್ ರಿಬ್ಬನ್ ಕ್ಲಬ್‌ಗಳು, ಮತ್ತು ಸ್ವಯಂ ಸೇವಾ ಸಂಸ್ಥೆಗಳು, ಹಾಸನ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ವಿಶ್ವ ಏಡ್ಸ್ ದಿನ-2017 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಏಡ್ಸ್, ಹೆಚ್.ಐ.ವಿ. ಸೋಂಕಿತರಿಗೆ ಸಮಾಜದಲ್ಲಿ ಸಮಾನವಾದ ಸ್ಥಾನಮಾನವನ್ನು ಕಲ್ಪಿಸುವ ಮೂಲಕ ಸಾಮಾಜಿಕ ಆರೋಗ್ಯವನ್ನು ಕಾಪಾಡಿಕೊಂಡು ಎಲ್ಲರಿಗೂ ಬದುಕುವ ಹಕ್ಕನ್ನು ನಿರ್ಮಿಸೋಣ ಎಂದರು.

ಏಡ್ಸ್ ಮುಕ್ತ ಜಿಲ್ಲೆಯನ್ನಾಗಿಸಲು ಸ್ವಯಂಪ್ರೇರಿತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಘ-ಸಂಸ್ಥೆಗಳಿಗೆ ಅವರು ಅಭಿನಂದಿಸಿದರು.

ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ॥ರಾಜ್‌ಗೋಪಾಲ್ ಮಾತನಾಡಿ, ಸಾಮಾಜಿಕ ಹಿತದೃಷ್ಟಿಯಿಂದ ಎಲ್ಲರೂ ಒಗ್ಗಟ್ಟಾಗಿ ಸಾರ್ವಜನಿಕರಲ್ಲಿ ಏಡ್ಸ್ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ನಮ್ಮ ಜಿಲ್ಲೆಯನ್ನು ಪ್ರಥಮ ಏಡ್ಸ್ ಮುಕ್ತ ಜಿಲ್ಲೆಯನ್ನಾಗಿಸಲು ಶ್ರಮಿಸೋಣ ಎಂದು ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಏಡ್ಸ್ ಹಾಗೂ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ॥ನಾಗೇಶ್ ಆರಾಧ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಜಾಥಾಕ್ಕೆ ಚಾಲನೆ: ವಿಶ್ವ ಏಡ್ಸ್ ದಿನದ ಅಂಗವಾಗಿ ಏಡ್ಸ್ ಕುರಿತು ಜಾಗೃತಿ ಜಾಥಾವನ್ನು ಏರ್ಪಡಿಸಲಾಗಿತ್ತು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಜಾನಕಿ ಅವರು ಹಸಿರು ಬಾವುಟ ತೋರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಪೂರ್ಣಿಮ, ಜಿಲ್ಲಾ ವಾರ್ತಾಧಿಕಾರಿ ವಿನೋದ್ ಚಂದ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ॥ಆರ್. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು. ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಹೊರಟ ಮೆರವಣಿಗೆ ಎನ್.ಆರ್.ವೃತ್ತದ ಮಾರ್ಗವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ ಸೇರಿತು.

ಗಮನ ಸೆಳೆದ ಕಿರು ನಾಟಕ : ಹಿಮ್ಸ್ ಮತ್ತು ರಾಜೀವ್ ಕಾಲೇಜಿನ ನರ್ಸಿಂಗ್ ವಿದ್ಯಾರ್ಥಿಗಳ ಏಡ್ಸ್ ಬಗ್ಗೆ ಅರಿವು ಮೂಡಿಸುವ ಕಿರು ನಾಟಕ ಎಲ್ಲರ ಗಮನ ಸೆಳೆಯಿತು.

ಸನ್ಮಾನ ಕಾರ್ಯಕ್ರಮ : ಏಡ್ಸ್ ಬಗ್ಗೆ ಅರಿವು ಮೂಡಿಸಲು ಸತತವಾಗಿ ಕಾರ್ಯನಿರ್ವಹಿಸಿದ ಎಲ್ಲಾ ಸಂಘ ಸಂಸ್ಥೆ ಸದಸ್ಯರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಕೆ.ಶಂಕರ್, ವೈ.ಎಸ್.ಆರ್. ಫೌಂಡೇಷನ್ ಅಧ್ಯಕ್ಷ ವೈ.ಎನ್.ರಮೇಶ್, ಜೀವನಾಶ್ರಯ ನೆಟ್‌ವರ್ಕ್ ಅಧ್ಯಕ್ಷ ಜಿ.ಎಸ್.ರಂಗಸ್ವಾಮಿ, ಡಾ॥ಹಿರಣ್ಣಯ್ಯ, ರಾಜೀವ್ ಕಾಲೇಜು ಪ್ರಾಂಶುಪಾಲ ಜಸಿಂಟ್, ಸಂಗಮ ಸಂಸ್ಥೆ ಸದಸ್ಯರಾದ ನಿಶಾ, ವಿವಿಧ ಸಂಘ ಸಂಸ್ಥೆಯ ಸದಸ್ಯರು, ತೃತೀಯ ಲಿಂಗಿಗಳು, ಜಿಲ್ಲೆಯ ಎಲ್ಲಾ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ವೈದ್ಯರೇ, ಸರ್ಕಾರಿ ಸಂಬಳ ಪಡೆದು ಖಾಸಗಿ ಪ್ರಾಕ್ಟೀಸ್ ಮಾಡುವುದು ಸರಿಯೇ?

ಇತ್ತೀಚೆಗೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಮಸೂದೆ ವಿರುದ್ಧ ದೊಡ್ಡ ಪ್ರತಿಭಟನೆ ನಡೆಯಿತು. ಈಗ ಅದು ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಮಂಡನೆ ಆಗಿದೆ. ಒಟ್ಟು ಚಳವಳಿ ಸಂದರ್ಭದಲ್ಲಿ ನಡೆದ ಚರ್ಚೆಯಲ್ಲಿ ಖಾಸಗಿ ಆಸ್ಪತ್ರೆಗಳು, ಖಾಸಗಿ ವೈದ್ಯರ ಕುರಿತೇ ಹೆಚ್ಚು ಚರ್ಚೆ ನಡೆಯಿತು.

ಇಲ್ಲಿ ಮುಖ್ಯವಾಗಿ ಸರ್ಕಾರಿ ಆಸ್ಪತ್ರೆಗಳ ಸುಧಾರಣೆ, ವೈದ್ಯರು, ಸಿಬ್ಬಂದಿಗಳ ಕರ್ತವ್ಯ ನಿಷ್ಠೆ ಬಗ್ಗೆ ಚರ್ಚೆಯಾಗಬೇಕಿತ್ತು. ಇವರು ಸರ್ಕಾರದಿಂದ ಸಂಬಳ ಪಡೆಯುತ್ತಿದ್ದಾರೆ. ಖಾಸಗಿ ವೈದ್ಯರು ಸಂಬಳ ಪಡೆಯುತ್ತಿಲ್ಲ, ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳು ಇದ್ದರೂ ಕೂಡ ಜನರು ಖಾಸಗಿ ಆಸ್ಪತ್ರೆಗೆ ಹೋಗುತ್ತಿದ್ದಾರೆ. ಕೆಲವರು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗುವುದು, ಚಿಕಿತ್ಸೆ ಪಡೆಯುವುದು ಅವಮಾನ ಎಂದೂ ಭಾವಿಸಿದ್ದಾರೆ.

ಹಾಗೆ ನೋಡಿದರೆ ಲಂಡನ್‌ನಲ್ಲಿ ಶೇ.75ರಷ್ಟು ಮಂದಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ಪಡೆಯುತ್ತಾರೆ. ಅಲ್ಲಿ ಎಲ್ಲಾ ತರಹದ ಕಾಯಿಲೆಗಳಿಗೆ ವಿಶ್ವಮಟ್ಟದ ಚಿಕಿತ್ಸೆ ಸಿಗುತ್ತದೆ. ಇಂಗ್ಲೆಂಡಿನ ವೈದ್ಯಕೀಯ ವ್ಯವಸ್ಥೆ ಪ್ರಪಂಚದಲ್ಲಿ ಅಪಾರ ಮನ್ನಣೆ ಪಡೆದಿದೆ.

ಇನ್ನು ಕ್ಯೂಬಾದಲ್ಲಿ ಒಂದೇ ಒಂದು ಖಾಸಗಿ ಆಸ್ಪತ್ರೆಗಳೇ ಇಲ್ಲ. ಅದು ಸಮಾಜವಾದಿ ದೇಶವಾಗಿರುವುದರಿಂದ ಆರೋಗ್ಯ ಸೇವೆ ವಿಚಾರದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ವಿಶ್ವ ಮಟ್ಟದಲ್ಲಿ ತುಂಬಾ ಹೆಸರು, ಜನಮನ್ನಣೆ ಗಳಿಸಿದೆ. ನಮ್ಮ ರಾಜ್ಯದಲ್ಲಿ ಇಂದು ಶೇ.20ರಷ್ಟು ಜನರು ಮಾತ್ರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೆ ಉಳಿದ ಶೇ.80ರಷ್ಟು ಮಂದಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಪರಿಸ್ಥಿತಿ ಬದಲಾಗಬೇಕು. ಶೇ.20ರಷ್ಟು ಅಲ್ಲ ಶೇ.40ರಷ್ಟು ಮಂದಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತಾಗಬೇಕು. ಆ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆಗಳ ಗುಣಮಟ್ಟ ಅಂದರೆ ಖಾಸಗಿ ಆಸ್ಪತ್ರೆಗಳಲ್ಲಿ ಸಿಗುವ ಸೇವೆ, ಗುಣಮಟ್ಟದ ಚಿಕಿತ್ಸೆಗೆ ಸಮಾನವಾಗಿರಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅಗತ್ಯ.

ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಇದ್ದರೂ ಕೂಡ ಒಂದು ಎಂ.ಆರ್.ಐ. ಸ್ಕ್ಯಾನಿಂಗ್ ಯೂನಿಟ್ ಇಲ್ಲ. ಇದು ತುಂಬಾ ವಿಷಾದಕರ. ಅದೇ ಖಾಸಗಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಸೆಂಟರ್, ಪ್ರಯೋಗಾಲಯ ಸೌಲಭ್ಯ ಕಲ್ಪಿಸಿಕೊಳ್ಳುತ್ತಾರೆ. ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಎಂ.ಆರ್.ಐ. ಸ್ಕ್ಯಾನಿಂಗ್ ಸೌಲಭ್ಯ ಇಲ್ಲ ಎಂದರೆ ಅದು ರಾಜಕಾರಣಿಗಳ ಅಕ್ಷಮ್ಯ ಅಪರಾಧ.

ಆರೋಗ್ಯ ಸಚಿವ ರಮೇಶ್ ಕುಮಾರ್ ಅವರು ರಾಜ್ಯದ ಎಲ್ಲ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಸ್ಕ್ಯಾನಿಂಗ್ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯ ಕಲ್ಪಿಸುವುದಾಗಿ ಹೇಳಿದ್ದಾರೆ. ಇಲ್ಲಿ ಮುಖ್ಯವಾದ ವಿಚಾರ ಏನೆಂದರೆ, ಸರ್ಕಾರಿ ಆಸ್ಪತ್ರೆಗಳ ವ್ಯವಸ್ಥೆ ಹದಗೆಡಲು ಸರ್ಕಾರಿ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿರುವುದೇ ಆಗಿದೆ. ಹಾಸನ ಸರ್ಕಾರಿ ಮೆಡಿಕಲ್ ಕಾಲೇಜಿಗೆ ಬರುವ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಆದರೆ ಕಾನೂನಿನಲ್ಲಿ ಸರ್ಕಾರಿ ಆಸ್ಪತ್ರೆ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ನಿರ್ಬಂಧವಿದೆ ಎಂದು ಹೇಳಲಾಗುತ್ತಿದೆ. ಹೀಗಿದ್ದೂ ಖಾಸಗಿಯಾಗಿ ಪ್ರಾಕ್ಟೀಸ್ ಮಾಡುವುದು ಸರ್ಕಾರಿ ವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದರಿಂದ ಸರ್ಕಾರಿ ಆಸ್ಪತ್ರೆಗಳ ವೈದ್ಯರು ಸಂಜೆ ವೇಳೆ ರೋಗಿಗಳನ್ನು ಬುಕ್ ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. (-4ನೇ ಪುಟಕ್ಕೆ)

ನಾಳೆ ಸಾವಯವ ಸಂತೆ

ಹಾಸನ : ನಗರದ ಆರ್.ಸಿ.ರಸ್ತೆ ಬಳಿ ಇರುವ ಎನ್.ಸಿ.ಸಿ. ಕಛೇರಿ ಮುಂದೆ ಭಾನುವಾರ ಬೆಳಿಗ್ಗೆ 8 ಗಂಟೆಯಿಂದ 11 ಗಂಟೆಯವರೆಗೂ ಸಾವಯವ ಸಂತೆ ಹಮ್ಮಿಕೊಳ್ಳಲಾಗಿದ್ದು, ಈ ವೇಳೆ ರೈತರಿಂದ ಗ್ರಾಹಕರಿಗೆ ನೇರ ಮಾರಾಟ ಮಾಡುವ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಕೃಷಿಕರ ಒಕ್ಕೂಟದ ಜಯಪ್ರಸಾದ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಅವರು ಮಾತನಾಡಿ, ಹಾಸನ ಮತ್ತು ಕೊಡಗು ಜಿಲ್ಲೆಗಳ ಸಾವಯವ ಕೃಷಿಕರ ಒಕ್ಕೂಟ, ಪರಿಶುದ್ಧ ಆಹಾರ ಆರ್ಗ್ಯಾನಿಕ್ ಫಾರ್ಮರ್ ಅಸೋಸಿಯೇಷನ್, ಸ್ವದೇಶಿ ಜಾಗರಣಾ ಮಂಚ್ ಹಾಗೂ ಅವನಿ ಆರ್ಗ್ಯಾನಿಕ್ಸ್ ಸಂಯುಕ್ತಾಶ್ರಯದಲ್ಲಿ ಈ ಸಾವಯವ ಸಂತೆ ಹಮ್ಮಿಕೊಳ್ಳಲಾಗಿದ್ದು, ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಪ್ರತಿಯೊಂದು ಗ್ರಾಮದಲ್ಲಿಯೂ ಸ್ಮಶಾನ ನಿರ್ಮಾಣ

ಅರಕಲಗೂಡು : ಗ್ರಾಮದಲ್ಲಿ ಸ್ಮಶಾನ, ಶಾಲೆ ಹಾಗೂ ದೇವಾಲಯಗಳು ಇದ್ದರೆ ಅಂತಹ ಗ್ರಾಮ ಸರ್ವ ಅಭಿವೃದ್ಧಿಯಾಗಿದೆ ಎನ್ನುವ ಮೂಲಕ ಸಮಾಜದಲ್ಲಿ ಉತ್ತಮ ಗ್ರಾಮವೆನಿಸಿಕೊಳ್ಳುತ್ತದೆ. ನಮ್ಮ ಕಾಂಗ್ರೆಸ್ ಸರಕಾರ ಪ್ರತಿಯೊಂದು ಗ್ರಾಮಕ್ಕೂ ಸ್ಮಶಾನ ನಿರ್ಮಿಸಿಕೊಡಲು ಮುಂದಾಗಿದ್ದು, ದೇವಾಲಯ ಹಾಗೂ ಶಾಲೆಗಳಿಗೂ ಸಹ ಹೆಚ್ಚಿನ ಅನುದಾನವನ್ನು ನೀಡುತ್ತಿದೆ ಎಂದು ಪಶು ಸಂಗೋಪನೆ, ರೇಷ್ಮೆ ಖಾತೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ತಿಳಿಸಿದರು.

ಅರಕಲಗೂಡು ತಾಲ್ಲೂಕು ಕೊಣನೂರು ಹೋಬಳಿಯ ಕಬ್ಬಳಿಗೆರೆ ಗ್ರಾಮದ ಬೆಟ್ಟದ ತಪ್ಪಲಿನಲ್ಲಿ 16.10 ಕೋಟಿ ರೂ. ವೆಚ್ಚದ ಕಿತ್ತೂರು ರಾಣಿ ಚನ್ನಮ್ಮ ಹೆಣ್ಣು ಮಕ್ಕಳ ವಸತಿ ಶಾಲೆಗೆ ಶುಕ್ರವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಕಬ್ಬಳಿಗೆರೆ ಬೆಟ್ಟಕ್ಕೆ ಕಾಂಕ್ರೀಟ್ ನಿರ್ಮಿತ ರಸ್ತೆ ಕಾಮಗಾರಿ ಈಗಾಗಲೇ ನಡೆಯುತ್ತಿದೆ ಮತ್ತು 35 ಲಕ್ಷ ರೂ.ನಲ್ಲಿ ಬೆಟ್ಟದ ಮೇಲಿರುವ ದೇವಾಲಯ ಜೀರ್ಣೋದ್ಧಾರ ಕಾಮಗಾರಿ ಶೀಘ್ರದಲ್ಲಿ ನಡೆಯಲಿದೆ ಎಂದರು.

ಅರಕಲಗೂಡಿನ ದೊಡ್ಡಮ್ಮ ದೇವಾಲಯದಿಂದ ಕೊಣನೂರಿನವರೆಗೆ ಸಾಲಗೇರಿ ರಸ್ತೆ ಅಗಲೀಕರಣ ಸೇರಿದಂತೆ ಉಳಿದೆಡೆ 5 ಮೀ. ರಸ್ತೆಯನ್ನು ಅಂದಾಜು 1 ಕೋಟಿ 20 ಲಕ್ಷ ರೂ. ವೆಚ್ಚದಲ್ಲಿ ಹಾಗೂ ಕೊಣನೂರು ಆರಂಭದಿಂದ ಗೌಡರ ಬೀದಿಯ ಮೂಲಕ ಕೊಳಲು ಗೋಪಾಲ ಕೃಷ್ಣ ದೇವಾಲಯದವರೆಗೆ ಕಾಂಕ್ರೀಟ್ ರಸ್ತೆ ಇನ್ನು ಕೇವಲ 15 ರಿಂದ 20 ದಿನಗಳಲ್ಲಿ ಆರಂಭವಾಗಲಿದೆ ಎಂದರು.

ಕೇರಳಾಪುರದಿಂದ ಬಾಣಾವರದ ವರೆಗಿನ 29 ಕಿಮೀ ಹೆದ್ದಾರಿ ರಸ್ತೆಯು 100 ಕೋಟಿ ರೂ. ವೆಚ್ಚದಲ್ಲಿ ಅತೀ ಶೀಘ್ರದಲ್ಲಿಯೇ ಆರಂಭವಾಗಲಿದೆ. ಇದರ ಜೊತೆಗೆ ರಾಮನಾಥಪುರ ಸೇತುವೆ ಹಾಗೂ ಬಸವಾಪಟ್ಟಣ-ರುದ್ರಪಟ್ಟಣ ಸಂಪರ್ಕ ಸೇತುವೆ ಮತ್ತು ರಾಮನಾಥಪುರದಿಂದ ಗಂಗೂರುವರೆಗಿನ ಹೆದ್ದಾರಿ ರಸ್ತೆಯೂ ಸಹ 9 ಕೋಟಿ ರೂ ವೆಚ್ಚದಲ್ಲಿ ಶೀಘ್ರದಲ್ಲಿ ಮುಗಿಯಲಿದೆ ಎಂದರು. (-4ನೇ ಪುಟಕ್ಕೆ)